**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**

**<u>ಎಸ್.ಸಿ. ನಂಃ 10015/2019</u>**

**ಚಾಸಾ ಃ 02**

**ಪ್ರಾಸಾ ಃ 10**

| | | |
|---|---|---|
| **ಹೆಸರು** | **ಃ** | **ಪವನ್‌ಕುಮಾರ್** |
| **ತಂದೆಯ ಹೆಸರು** | **ಃ** | **ಕೆ.ಜಿ. ಗೋಪಾಲ** |
| **ವಯಸ್ಸು** | **ಃ** | **23 ವರ್ಷ** |
| **ವೃತ್ತಿ** | **ಃ** | **ಖಾಸಗಿ ಕೆಲಸ** |
| **ವಾಸ** | **ಃ** | **ದೊಡ್ಡಬಳ್ಳಾಪುರ** |

**ಈ ದಿನ ದಿನಾಂಕಃ 08.12.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ</u>**

1. ನನಗೆ ಚಾಸಾ-1 ಮಂಜುನಾಥ ಗೊತ್ತಿರುತ್ತಾರೆ. ಅವರ ತಮ್ಮ ಮೃತ ಗಂಗಾಧರ ಅಲಿಯಾಸ ದಾಸ ಗೊತ್ತಿರುತ್ತಾರೆ. ಆರೋಪಿ ಆನಂದ ಸಹ ಗೊತ್ತಿರುತ್ತಾನೆ. ಮುಂಚೆ 2018-2019 ರಲ್ಲಿ ನಾನು ಚಾಸಾ-1 ಮಂಜುನಾಥ ಅವರಲ್ಲಿ ಮನೆ ಮನೆಗೆ ಬಿಸ್‌ಲೇರಿ ನೀರು ಹಾಕುವ ಕೆಲಸ ಮಾಡುತ್ತಿದ್ದೇನು. ಈಗ ಬಿಟ್ಟಿರುತ್ತೇನೆ.

2. ದಿನಾಂಕಃ 07.01.2019 ರಂದು ರಾತ್ರಿ 09.30 ಗಂಟೆಗೆ ದೇವರಾಜ ನಗರದ ಹೋಟೇಲ್ ಅಜ್ಜಿಮನೆಗೆ ನನ್ನನ್ನು ನೀರು ಹಾಕಲು ಕಳುಹಿಸಿದ್ದರು. ಹಾಕಿ ಬಿಟ್ಟು ಬಂದಿರುತ್ತೇನೆ. ಅಜ್ಜಿಯವರು ರೂ. 50 ಗಳ ಕಾಸು ನೀಡಿರುತ್ತಾರೆ. ಅದನ್ನು ಮಂಜುನಾಥ ಅವರ ತಾಯಿಗೆ ಕೊಟ್ಟು ರೂ. 20 ಗಳನ್ನು ವಾಪಸ್ಸು ಪಡೆದುಕೊಂಡು ದೇವರಾಜು ಅರಸ್ ಬಡಾವಣೆಯಲ್ಲಿರುವ ಪ್ರೀತಿ ವೈನ್ಸ್‌ಗೆ ಎಣ್ಣೆಹಾಕಲು ಹೋಗಿರುತ್ತೇನೆ. ಕುಡಿದು ನಾನು ಪ್ರೀತಿ ವೈನ್ಸ್ ಸರ್ಕಲ್‌ನಲ್ಲಿ ನಿಂತಿದ್ದೇನು. ಆಗ

ದಾಸ ಅವರೂ ಸಹ ಅಲ್ಲಿಯೇ ನಿಂತಿದ್ದರು. ನನ್ನನ್ನು ನೋಡಿ ಕರೆದರು. ಆಗ ನಾನು ಅವರ ಹತ್ತಿರ ಹೋದೇನು. ಅವರು ನನಗೆ 2 ಕ್ವಾಟರ್ ಮಧ್ಯ ತೆಗೆದುಕೊಂಡು ಬಾ ಎಂದು ಹೇಳಿರುತ್ತಾರೆ. ನಾನು ತೆಗೆದುಕೊಂಡು ಬಂದು ಕೊಟ್ಟೆನು. ಆಗ ಇಬ್ಬರೂ ಸೇರಿ ಕುಡಿದು ಸಿಗರೇಟ್ ಸೇದುತ್ತ ನಿಂತಿದ್ದೇವು.

3. ಆಗ ಆರೋಪಿ ಆನಂದ, ಅವರ ಅಣ್ಣ ಲೋಕಿ ಮತ್ತು ಅವರ ಸ್ನೇಹಿತ ಸ್ವಾಮಿ ಮೂರು ಜನರು ಪ್ರೀತಿ ವೈನ್ಸ್ ಸರ್ಕಲ್ ಬಳಿ ಬಂದಿರುತ್ತಾರೆ. ಆ ಸಮಯದಲ್ಲಿ ದಾಸಣ್ಣ ಅವರು ಅವರನ್ನು ಕೂಗುವಂತೆ ನನಗೆ ಹೇಳಿದರು. ನಾನು ಕರೆದಾಗ ಅವರು ಬಂದು ದಾಸಣ್ಣ ಅವರನ್ನು ಪ್ರೀತಿ ವೈನ್ಸ್ ಸರ್ಕಲ್‌ನಲ್ಲಿದ್ದ ಸಂದಿಯೋಳಗೆ ಕರೆದುಕೊಂಡು ಹೋಗಿರುತ್ತಾರೆ. ನಾನು ಅಲ್ಲಿಯೇ ನಿಂತಿದ್ದೇನು. ಸ್ವಲ್ಪ ಸಮಯದ ನಂತರ ಆರೋಪಿ ಮತ್ತು ದಾಸ ಅವರಲ್ಲಿ ಜಗಳ ಆಗುತ್ತಿತ್ತು, ನಾನು ಹೋಗಿ ನೋಡಿದಾಗ ಆರೋಪಿಯ ಕೈಯಲ್ಲಿ ಮಚ್ಚು ಇತ್ತು, ನಾನು ಬಿಡಿಸಲು ಹೋದಾಗ ನನ್ನ ತಲೆಗೆ ಮಚ್ಚಿನಿಂದ ಹೊಡೆದಿರುತ್ತಾರೆ. ಪುನಃ ಬಿಡಿಸಲು ಹೋದಾಗ ನನ್ನ ಎಡಗೈಗೆ ಹೊಡೆದಿರುತ್ತಾರೆ.

4. ನನಗೆ ತಲೆ ಸುತ್ತು ಬಂದು ಬಿದ್ದಿರುತ್ತೇನೆ. 10 ನಿಮಿಷದ ನಂತರ ಎದ್ದು ನೋಡಿದಾಗ ಆರೋಪಿತರು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದರು. ದಾಸ ಅವರನ್ನು ನೋಡಿದಾಗ ದಾಸ ಅವರನ್ನು ಆರೋಪಿಯು ಹೊಟ್ಟೆಗೆ, ಕುತ್ತಿಗೆಗೆ ಮತ್ತು ಕಣ್ಣಿಗೆ ಮಚ್ಚಿನಿಂದ ಹೊಡೆದಿರುತ್ತಾನೆ. ಕಣ್ಣುಗುಡ್ಡೆಯು ಹೊರಗೆ ಬಂದಿತ್ತು, ನಾನು ಓಡಿ ಹೋಗಿ ದಾಸ ಅವರ ಮನೆಯಲ್ಲಿ ಅವರ ಅಣ್ಣನಿಗೆ ಮತ್ತು ಅವರ ತಾಯಿಗೆ ತಿಳಿಸಿರುತ್ತೇನೆ. ಸದರಿ ಮಂಜಣ್ಣ ಅವರನ್ನು ಆಟೋ ಮಾಡಿಕೊಂಡು ಘಟನಾ ಸ್ಥಳಕ್ಕೆ ನಾನು ಕರೆದುಕೊಂಡು ಬಂದಿರುತ್ತೇನೆ. ನಂತರ ಸದರಿ

ಆಟೋದಲ್ಲಿ ನಾನು ಮತ್ತು ಮಂಜಣ್ಣ ಅವರು ದಾಸಣ್ಣ ಅವರನ್ನು ದೊಡ್ಡಬಳ್ಳಾಪುರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ.

5. ಅದನ್ನು ನೋಡಿದಾಗ ದಾಸಣ್ಣ ಅವರ ಕಣ್ಣು ಗುಡ್ಡೆ ಹೊರಗೆ ಬಂದಿದ್ದರಿಂದ ಮತ್ತು ಹೊಟ್ಟೆಗೆ ಮತ್ತು ಕುತ್ತಿಗೆಗೆ ಹೊಡೆದ್ದಿದರಿಂದ ಪುನಃ ತಲೆಸುತ್ತು ಬಂದಿರುತ್ತದೆ. ನನ್ನ ತಲೆಗೆ ಬಿದ್ದಿದ್ದ ಗಾಯಕ್ಕೆ ಹೊಲಿಗೆಯನ್ನು ಹಾಕಿರುತ್ತಾರೆ. ನಂತರ ನನ್ನನ್ನು ಗೆಳತಿ ವಾರ್ಡ್‌ಗೆ ಒಳರೋಗಿಯಾಗಿ ಚಿಕಿತ್ಸೆ ಮಾಡಿರುತ್ತಾರೆ.

6. ದಿನಾಂಕಃ 09.01.2019 ರಂದು ಸಂಜೆ 04.30 ಗಂಟೆ ಸಮಯದಲ್ಲಿ ಪೋಲೀಸ್ ಸಬ್ ಇನ್ಸ್‌ಪೇಕ್ಟರ್ ರವರು ಮತ್ತ ಪೋಲೀಸ್‌ನವರು ಆಸ್ಪತ್ರೆಗೆ ಬಂದಿದ್ದರು. ನನ್ನನ್ನು ವಿಚಾರಣೆ ಮಾಡಿರುತ್ತಾರೆ. ಘಟನೆಯ ವಿಚಾರವನ್ನು ನಾನು ಅವರಿಗೆ ಹೇಳಿರುತ್ತೇನೆ. ಪೋಲೀಸರು ನನ್ನ ಜೀನ್ಸ್ ಪ್ಯಾಂಟ್, ಶರ್ಟ್, ಬನಿಯನ್ ಮತ್ತು ಅಂಡರ್‌ವಿಯರ್ ಅನ್ನು ತೆಗೆದುಕೊಂಡು ನನ್ನ ಸಹಿ ಪಡೆದುಕೊಂಡಿರುತ್ತಾರೆ. ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ದಾಖಲೆಯನ್ನು ಈಗಾಗಲೇ ನಿಪಿ-23 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸುತ್ತೇನೆ. ಅದನ್ನು ನಿಪಿ-23 ಬಿ ಎಂದು ಗುರುತಿಸಲಾಯಿತು.

7. ನನ್ನಿಂದ ಪೋಲೀಸರು ತೆಗೆದುಕೊಂಡಿದ್ದ ಜೀನ್ಸ್ ಪ್ಯಾಂಟ್ ಮತ್ತು ಶರ್ಟ್‌ನ್ನು ಈಗ ನೋಡಿ ಗುರುತಿಸುತ್ತೇನ. ಅವುಗಳನ್ನು ಈಗಾಗಲೇ ಮು.ಮಾ. 11 ಮತ್ತು 12 ಎಂದು ಗುರುತಿಸಲಾಗಿರುತ್ತದೆ. ಮಹಜರ್ ಬರೆದುಕೊಂಡು ಅವುಗಳನ್ನು ತೆಗೆದುಕೊಂಡು ನನ್ನ ಸಹಿ ಪಡೆದುಕೊಂಡಿರುತ್ತಾರೆ. ಆ ಸಮಯದಲ್ಲಿ ಸರ್ಕಲ್ ಇನ್ಸ್‌ಪೇಕ್ಟ್‌ರ ಸಿದ್ದರಾಜು, ಸಬ್‌ಇನ್ಸ್‌ಪೇಕ್ಟರ್

ಪಾಟೀಲ್, ಪೋಲೀಸರಾದ ಪಾಂಡು ಮತ್ತು ವೈದ್ಯರು ಇದ್ದರು. ವಾರ್ಡ್‌ನಲ್ಲಿದ್ದಾಗ ವೈದ್ಯರ ಸಮಕ್ಷಮ ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತಾರೆ. ನನಗೆ ಮತ್ತು ದಾಸಣ್ಣ ಅವರಿಗೆ ಆರೋಪಿ ಹೊಡೆದ ಮಚ್ಚನ್ನು ಇಂದು ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ. ಅದನ್ನು ಮು.ಮಾ. 10 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ.

8. ದಿನಾಂಕಃ 11.01.2019 ರಂದು ಕೋರ್ಟ್‌ಗೆ ಬಂದು ನಡೆದಿದ್ದ ವಿಚಾರವನ್ನು ನ್ಯಾಯಾಧೀಶರಿಗೆ ಹೇಳಿರುತ್ತೇನೆ. ನ್ಯಾಯಾಧೀಶರ ಮುಂದೆ ಹೇಳಿದ ನನ್ನ ಹೇಳಿಕೆಯಲ್ಲಿ ಕಬಾಬ್ ಆನಂದ ಅವರು ದಾಸಣ್ಣನಿಗೆ ದಿನಾಂಕಃ 07.01.2019 ರಂದು ಹೊಡೆದಿರುವುದನ್ನು ನಾನು ಹೇಳಿರುತ್ತೇನೆ. ನಂತರ ಪುನಃ ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ.

**(ಈ ಹಂತದಲ್ಲಿ ಸದರಿ ಸಾಕ್ಷಿದಾರರು ದಂಡ ಪ್ರಕ್ರಿಯೆ ಸಂಹಿತೆ ಕಲಂ 164 ರಡಿ ನೀಡಿದ ಹೇಳಿಕೆಯು ಕಡತದಲ್ಲಿ ಇರುವುದಿಲ್ಲ ಮತ್ತು ದೊಡ್ಡಬಳ್ಳಾಪುರದ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಇದ್ದುಆದ್ದರಿಂದ ಸದರಿ ಹೇಳಿಕೆಯನ್ನು ನ್ಯಾಯಾಲಯದಿಂದ ಪಡೆದುಕೊಳ್ಳಬೇಕಾಗಿದ್ದರಿಂದ ಮುಂದೂಡಲಾಯಿತು.)**

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ